# ***ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬನಹಟ್ಟಿ***

**ಉಪಸ್ಥಿತರು : ಶುಷ್ಮ ಟಿ.ಸಿ.**

ಬಿ.ಕಾಂ., ಎಲ್.ಎಲ್.ಬಿ.,

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ

**ಸಿ.ಸಿ. ನಂ.23/2018**

ಫಿರ್ಯಾದಿ : ಸರಕಾರದ ಪರವಾಗಿ ತೇರದಾಳ ಪೋಲಿಸ ಠಾಣೆ

**ವಿರುದ್ಧ**

ಆರೋಪಿಗಳುಃ ಅಣ್ಣಪ್ಪ ಕಿಟ್ಟಪ್ಪ ಗೋಣಿ ಉರ್ಫ ಕೋಲಕಾರ ಹಾಗೂ ಇನ್ನೊಬ್ಬರು.

**–:ದೋಷಾರೋಪಣೆ :–**

*ಶುಷ್ಮ ಟಿ.ಸಿ, ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಬನಹಟ್ಟಿ ಆದ ನಾನು, ಆರೋಪಿತರಾದ :*

ಆರೋಪಿ ನಂ.1) ಅಣ್ಣಪ್ಪ ಕಿಟ್ಟಪ್ಪ ಗೋಣಿ ಉರ್ಫ ಕೋಲಕಾರ, ಸಾಃ ಅನಗವಾಡಿ,

2) ಬಾಬು ಅವ್ವಪ್ಪ ಗೋಣಿ, ಸಾಃ ಅನಗವಾಡಿ, ತಾಃ ಬೀಳಗಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಫಿರ್ಯಾದಿದಾರಳಾದ ಶ್ರೀಮತಿ ಸುಂದ್ರವ್ವ ಇವರ ತವರೂರು ವಿಜಯಪುರ ತಾಲೂಕಿನ ಗುಣದಾಳ ಗ್ರಾಮವಿದ್ದು, ಫಿರ್ಯಾದಿಗೆ 4 ಜನರು ತಂಗಿಯರು ಇದ್ದು, ಅವರ ತಂದೆ ತಾಯಿಗೆ ಗಂಡಸು ಮಕ್ಕಳು ಇರಲಿಲ್ಲ. ಅವರ ತಂದೆಯ ಹೆಸರಿನಲ್ಲಿ 1 ಎಕರೆ ಜಮೀನು ಇದ್ದು, ಈ ಜಮೀನನ್ನು ಫಿರ್ಯಾದಿಯ ತಂದೆ ತಾಯಿ ತೀರಿಕೊಂಡ ನಂತರ ಫಿರ್ಯಾದಿ ಹಾಗೂ ಉಳಿದ ತಂಗಿಯರ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. 1 ನೇ ಆರೋಪಿತನಾದ ನೀನು ಫಿರ್ಯಾದಿಯ ತಂಗಿಯಾದ ರುಕ್ಮವ್ವ ಇವರ ಮಗನಿದ್ದು, 2 ನೇ ಆರೋಪಿತನಾದ ನೀನು ಫಿರ್ಯಾದಿಯ ತಂಗಿಯಾದ ತಾಯವ್ವ ಇವಳ ಗಂಡನಿದ್ದು, ಆರೋಪಿತರಾದ ನೀವಿಬ್ಬರೂ ಸದರಿ ಜಮೀನದ ಬಗ್ಗೆ ಫಿರ್ಯಾದಿಯ ಸಂಗಡ ಆಗಾಗ ತಂಟೆ ತಕರಾರು ಜಗಳ ಮಾಡುತ್ತಿದ್ದರು. ಫಿರ್ಯಾದಿ ಮತ್ತು ಫಿರ್ಯಾದಿಯ ತಂಗಿಯಾದ ಸಾಕ್ಷಿದಾರ ನಂ.4)ತಾಯವ್ವಾ ಗೋಣಿ ಇವರು ಗೋಲಬಾಂವಿಗೆ ಅವರ ಸಂಬಂಧಿಕರ ಮನೆಗೆ ಬಂದಿದ್ದು, ದಿನಾಂಕ 20-02-2017 ರಂದು 19-00 ಗಂಟೆಯ ಸುಮಾರಿಗೆ ಫಿರ್ಯಾದಿ ಮತ್ತು ತಾಯವ್ವಾ ಇಬ್ಬರೂ ಕೂಡಿ ತೇರದಾಳ ಗೋಲಬಾಂವಿ ರಸ್ತೆಯ ಹಾದಿ ಬಸವಣ್ಣನ ಗುಡಿಯ ಹತ್ತಿರ ಹೊರಟಾಗ, ಆರೋಪಿತರಾದ ನೀವಿಬ್ಬರೂ ಕೂಡಿಕೊಂಡು ಬಂದು ಅವರನ್ನು ಮುಂದೆ ಹೋಗದಂತೆ ಅಡ್ಡಗಟ್ಟಿ ಅಕ್ರಮ ತಡೆ ಮಾಡಿದ ಅಪರಾಧ ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.341 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಎರಡನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ 2 ನೇ ಆರೋಪಿತನಾದ ನೀನು ನಿನ್ನ ಹೆಂಡತಿ ತಾಯವ್ವ ಇವರಿಗೆ ಕೈಯಿಂದ ಹೊಡಿಬಡಿ ಮಾಡಿದ ಅಪರಾಧ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.323 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಮೂರನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ 1 ನೇ ಆರೋಪಿತನು ಫಿರ್ಯಾದಿಗೆ ಬಡಿಗೆಯಿಂದ ಅವರ ಎರಡೂ ಕಾಲುಗಳಿಗೆ ಹೊಡೆದು ಸಾದಾ ಗಾಯಪಡಿಸಿದ ಅಪರಾಧ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.324 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ನಾಲ್ಕನೇಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಮತ್ತು ತಾಯವ್ವ ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿದ ಅಪರಾಧ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.504 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ ಮೇಲ್ಕಾಣಿಸಿದ ಸಮಯ, ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಫಿರ್ಯಾದಿ ಮತ್ತು ತಾಯವ್ವ ಇವರಿಗೆ ಜೀವದ ಬೆದರಿಕೆ ಹಾಕಿದ ಅಪರಾಧ, ಆ ಮೂಲಕ ನೀವು ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ ಕಲಂ.34 ನೇದ್ದರಡಿಯಲ್ಲಿ ಅಪರಾಧ ಎಸಗಿರುತ್ತೀರಿ.

ಸ್ಥಳಃ ಬನಹಟ್ಟಿ. Sd/-

ದಿನಾಂಕಃ 03-09-2021. ಪ್ರ. ದ. ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ